ಅಕ್ಬರ್‌ಪುರದ ಟಂಡನ್ ಪಾಠಶಾಲೆ ಸೇರಿದ ರಾಮಮನೋಹರ, ನಾಲ್ಕನೇ ತರಗತಿ ಮುಗಿಸಿ ವಿಶ್ವೇಶ್ವರನಾಥ ಹೈಸ್ಕೂಲ್ ಸೇರಿದ. ಒಮ್ಮೆ ಹೀರಾಲಾಲ್, ಮತ್ತೊಮ್ಮೆ ರಾಮನಂದನ ತಮಸಾ ನದಿಯ ದಂಡೆಯ ಮೇಲಿದ್ದ ಶಾಲೆಗೆ ರಾಮಮನೋಹರನನ್ನು ಬಿಡಲು, ಕರೆ ತರಲು ಜೊತೆಗೆ ಹೋಗುತ್ತಿದ್ದರು. ಮುಂದೆ ಎಷ್ಟೋ ವರ್ಷಗಳ ನಂತರ ನಂದಕಿಶೋರ್ ನಾಯಿಂದಾ ಜೊತೆ ಲೋಹಿಯಾ ಅಕ್ಬರ್‌ಪುರಕ್ಕೆ ಹೋದಾಗ ಅಲ್ಲಿ ಕ್ಷೌರಿಕ ವೃತ್ತಿ ನಡೆಸುತ್ತಿದ್ದ ರಾಮನಂದನನನ್ನು 'ನಮ್ಮಣ್ಣ' ಎಂದು ನಂದಕಿಶೋರ್‌ಗೆ ಪರಿಚಯ ಮಾಡಿಕೊಟ್ಟರು. ಮುಂದೊಮ್ಮೆ ಲೋಹಿಯಾ ಕ್ಷೌರಿಕರ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ದೇಶದ ಗಮನ ಸೆಳೆಯುವ 'ನನ್ನ ಕ್ಷೌರಿಕ' ಲೇಖನ ಬರೆದರು; ಸಮಾಜವಾದಿ ಪಕ್ಷ ಇಂಥ ನೂರಾರು ತಬ್ಬಲಿ ಜಾತಿಗಳ ಅವಮಾನಗಳನ್ನು ಅರಿತು, ಅವುಗಳ ಸಾಮಾಜಿಕ, ಆರ್ಥಿಕ ಚಲನೆಗಳ ಪ್ರಶ್ನೆಗಳಿಗೆ ಪರಿಹಾರ ಹುಡುಕಲು ಪ್ರೇರಣೆಯಾದರು.

ಶಾಲಾ ಬಾಲಕ ರಾಮಮನೋಹರ ಕೊಳಲು ನುಡಿಸಲು ಕಲಿತ. ಗಿಲ್ಲಿ ದಾಂಡು, ಚೆಂಡಾಟಗಳನ್ನು ಇಷ್ಟಪಡುತ್ತಿದ್ದ. ಮೇಷ್ಟರುಗಳ ಪ್ರಿಯ ಹುಡುಗನಾದ; ತರಗತಿಯ ನಂಬರ್ ಒನ್ ವಿದ್ಯಾರ್ಥಿಯಾದ. ರಾಮಮನೋಹರನಿಗೆ ಸುತ್ತಮುತ್ತಣ ಜನರಿಗೆ ನೆರವಾಗುವುದೆಂದರೆ ಖುಷಿ. ಬಡವನೊಬ್ಬ ಬಾಯಾರಿ ಬಸವಳಿದಿದ್ದರೆ ರಾಮಮನೋಹರ ತಾನೇ ಬಾವಿಯಿಂದ ನೀರು ಸೇದಿ ಅವನಿಗೆ ನೀರುಣಿಸುವನು. ಊರಿನಲ್ಲಿ ಯಾರಿಗಾದರೂ ಕಾಯಿಲೆಯಾದರೆ ಆಂಬುಲೆನ್ಸ್ ಕರೆಯಲು ಓಡುವನು. ಯಾರಾದರೂ ಮಕ್ಕಳಿಗೆ ಹೊಡೆಯುತ್ತಿದ್ದರೆ ಹಿರೀಕನಂತೆ ನಡುವೆ ನುಗ್ಗಿ ಮಕ್ಕಳನ್ನು ಕಾಪಾಡಲೆತ್ನಿಸುವನು. ಒಮ್ಮೆ ದಾರಿಯಲ್ಲಿ ಧಡಿಯನೊಬ್ಬ ಪುಟ್ಟ ಹುಡುಗನೊಬ್ಬನಿಗೆ ಹೊಡೆಯುತ್ತಿದ್ದ. ಅದನ್ನು ನೋಡಿ ರೇಗಿದ ರಾಮಮನೋಹರ ನುಗ್ಗಿ ತನ್ನ ಪುಟ್ಟ ಕೈಗಳಿಂದ ಆ ಧಡಿಯನಿಗೆ ಹೊಡೆದು ಬಡಿದು ತನ್ನ ಪ್ರತಿಭಟನೆಯನ್ನು ದಾಖಲು ಮಾಡಿದ!

ಅಷ್ಟೊತ್ತಿಗಾಗಲೇ ಹೀರಾಲಾಲ್ ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಭಾವಕ್ಕೊಳಗಾಗಿದ್ದರು; ಕಾಂಗ್ರೆಸ್ ಪಾರ್ಟಿ ಆರಂಭಿಸಿದ್ದ ಸಮಾಜ ಪರಿವರ್ತನೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಬಡ ಮಕ್ಕಳಿಗೆ ನೆರವಾಗುತ್ತಿದ್ದರು. ಮೂಢನಂಬಿಕೆ, ಮೂಢ ಸಂಪ್ರದಾಯಗಳ ವಿರೋಧಿಯಾಗಿದ್ದರು. ಮಕ್ಕಳಿಗೆ ಕಿವಿ ಚುಚ್ಚಿಸುವುದು ಆ ಕಾಲದ ರೂಢಿಯಾಗಿದ್ದರೂ, ಹೀರಾಲಾಲ್ ಮಗನಿಗೆ ಕಿವಿ ಚುಚ್ಚಿಸಲಿಲ್ಲ. ಮಗನಿಗೆ ಶಾಲೆಯ ಶಿಕ್ಷಣದ ಜೊತೆಗೇ ಭಾರತದ ಪುರಾತನ ಇತಿಹಾಸ ಹಾಗೂ ಸಂಸ್ಕೃತಿಗಳನ್ನು ಪರಿಚಯಿಸಲು ಸಂಸ್ಕೃತ ಶಿಕ್ಷಣವನ್ನೂ ಕೊಡಿಸಿದರು. ಎಂಟು ವರ್ಷದ ಮಗನನ್ನು ಹೀರಾಲಾಲ್ ಅಹಮದಾಬಾದ್ ಕಾಂಗ್ರೆಸ್ ಸಮ್ಮೇಳನಕ್ಕೆ ಕರೆದೊಯ್ದರು. ಬಾಲ್ಯದಲ್ಲಿ ಮನೆಯಲ್ಲಿ ಹಬ್ಬಿದ್ದ ರಾಷ್ಟ್ರೀಯ ಭಾವನೆಯ ವಾತಾವರಣ ಹಾಗೂ ಸಂಸ್ಕೃತ ಶಿಕ್ಷಣ ತಮ್ಮ ವ್ಯಕ್ತಿತ್ವ ರೂಪಿಸುವಲ್ಲಿ ನೆರವಾದದ್ದನ್ನು ಮುಂದೊಮ್ಮೆ ಲೋಹಿಯಾ ನೆನೆಯುತ್ತಾರೆ. ಬಾಲ್ಯದ ಸಂಸ್ಕೃತ ಶಿಕ್ಷಣ ಮುಂದೆ ಅವರು ಭಾರತೀಯ ಮಹಾಕಾವ್ಯ ಹಾಗೂ ಪುರಾಣಗಳನ್ನು ಮೂಲದಲ್ಲೇ ಓದಿ, ಸಮಾಜವಾದಿ ನೋಟಗಳ ಮೂಲಕ ಮರುಪರಿಶೀಲಿಸಲು ನೆರವಾಯಿತು. ಅವರು ರಾಮ, ಕೃಷ್ಣ, ಶಿವ, ದ್ರೌಪದಿ, ಸಾವಿತ್ರಿಯರಂಥ ಪುರಾಣಪಾತ್ರಗಳನ್ನು ವಿವರಿಸಿದ ರೀತಿ ಸಮಾಜವಾದಿ ಸಂಸ್ಕೃತಿ ಚಿಂತನೆಯ ಹೊಸ ಮಾರ್ಗವನ್ನೇ ತೆರೆಯಿತು.

ಅಹಮದಾಬಾದ್ ಕಾಂಗ್ರೆಸ್ ಸಮ್ಮೇಳನ ಮುಗಿದ ಮೇಲೆ ಹೀರಾಲಾಲ್ ಮಗನೊಡನೆ ಮುಂಬಯಿಗೆ ಬಂದು ನೆಲೆ ನಿಂತರು. ಮಗನನ್ನು ಮಾರವಾಡಿ ವಿದ್ಯಾಲಯ ಹೈಸ್ಕೂಲಿಗೆ ಸೇರಿಸಿದ ಹೀರಾಲಾಲ್ ಪೂರ್ಣಾವಧಿ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿದರು. ಮಾರವಾಡಿ ಶಾಲೆಯಲ್ಲಿ ತುಂಟ ರಾಮಮನೋಹರ ಜಾಣ ಹುಡುಗನಾಗಿ ಬೆಳೆದ. ವಾದ ಮಾಡುವ ಕಲೆ ಅವನಿಗೆ ಆಗಲೇ ಒಲಿಯತೊಡಗಿತ್ತು; ಅವನ ಮಾತಿನ ಒಗರು, ಮೊನಚು ಶಾಲೆಯ ಹುಡುಗರನ್ನು ಸೆಳೆಯುತ್ತಿತ್ತು.

ಸ್ವಾತಂತ್ರ್ಯ ಚಳುವಳಿಯ ಘೋಷಣೆಗಳು ದೇಶದ ಎಲ್ಲೆಡೆಯಂತೆ ಮುಂಬಯಿಯಲ್ಲೂ ಮೊಳಗುತ್ತಿದ್ದ ಕಾಲ ಅದು. 1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿ ಬಂದಿದ್ದ ಗಾಂಧೀಜಿ ಸ್ವಾತಂತ್ರ್ಯ ಚಳುವಳಿಗೆ ಹೊಸ ದಿಕ್ಕು, ಹೊಸ ಭಾಷೆ ಕೊಡತೊಡಗಿದ್ದರು. ಗಾಂಧೀಜಿಯವರ 'ಸ್ವರಾಜ್ಯ', 'ಸ್ವದೇಶಿ'ಗಳ ಕರೆ ದೇಶದುದ್ದಕ್ಕೂ ಮರುದನಿಸುತ್ತಿತ್ತು. 'ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ!', 'ವಿದೇಶಿ ಪಟಾಕಿ ಸುಡೋದು ಅನಾಚಾರ' ಮುಂತಾದ ಘೋಷಣೆಗಳು ಮಕ್ಕಳ ಬಾಯಲ್ಲೂ ಮೊಳಗುತ್ತಿದ್ದವು. ಸ್ವಾತಂತ್ರ್ಯ ಚಳುವಳಿ ಹೊಸ ಘಟ್ಟ ಪ್ರವೇಶಿಸಿತ್ತು. 1920ರ ಮೇ ತಿಂಗಳಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಅಸಹಕಾರ ಚಳುವಳಿಯ ರೂಪರೇಖೆಗಳನ್ನು ಸಿದ್ಧಪಡಿಸತೊಡಗಿತು. ಅದೇ ವರ್ಷ ಆಗಸ್ಟ್ ಮೊದಲನೆಯ ತಾರೀಕಿನಿಂದ ಅಸಹಕಾರ ಚಳುವಳಿ ಶುರುವಾಗಬೇಕೆಂದು ಗಾಂಧೀಜಿ ಕರೆ ಕೊಟ್ಟರು.

1 ಆಗಸ್ಟ್ 1920. ಬೆಳಗಿನ ಜಾವ ಬಾಲಗಂಗಾಧರ ತಿಲಕರು ನಿಧನರಾದ

## 'ಡಾಕ್ಟರ್ ಸಾಹೇಬ್'ಗೆ ಮುಖಾಮುಖಿಯಾಗುವ ಓದುಗ ಓದುಗಿಯರಿಗೆ...

**ರಾಮಮನೋಹರ ಲೋಹಿಯಾ** ಭಾರತೀಯ ಸಮಾಜವಾದವನ್ನು ರೂಪಿಸಿದ ಅಪೂರ್ವ ಚಿಂತಕ–ನಾಯಕರು. ಭಾರತದುದ್ದಕ್ಕೂ ಸಮಾಜವಾದಿ ರಾಜಕಾರಣ–ಚಿಂತನೆಗಳನ್ನು ರೂಪಿಸಿದ ಲೋಹಿಯಾವಾದ ಕರ್ನಾಟಕವನ್ನೂ ಪ್ರಭಾವಿಸಿದೆ. ಶಾಂತವೇರಿ ಗೋಪಾಲಗೌಡ, ಎಂ.ಡಿ. ನಂಜುಂಡಸ್ವಾಮಿಯವರ ಚಳವಳಿ–ಸಂಘಟನೆ–ಚಿಂತನೆ–ರಾಜಕಾರಣಗಳಿಂದ ಹಿಡಿದು ಹತ್ತಾರು ಕನ್ನಡ ಲೇಖಕರ ಕ್ರಿಯೆ–ಬರವಣಿಗೆ, ಹಾಗೂ ಸಾವಿರಾರು ಚಳವಳಿಗಾರರ, ಕಾರ್ಯಕರ್ತರ ಹೋರಾಟಗಳ ಹಿನ್ನೆಲೆಯಲ್ಲಿ ಲೋಹಿಯಾ ಪ್ರೇರಣೆಯಿದೆ.

ಈ ಎಲ್ಲರ ಮೂಲಕ ನನ್ನಂಥವರನ್ನೂ ಲೋಹಿಯಾ ಚಿಂತನೆ ಮುಟ್ಟಿದೆ; ಕಾಣುವ ಕಣ್ಣು ಕೊಟ್ಟಿದೆ. ಕನ್ನಡ ಸಾಹಿತ್ಯ, ಸಂಸ್ಕೃತಿ ಚಿಂತನೆಗಳ ದಿಕ್ಕು ಬದಲಿಸಿದ ಲೋಹಿಯಾರ ಸಮಗ್ರ ಕೃತಿಗಳ ಕನ್ನಡಾನುವಾದದ ಯೋಜನೆಯ ನಿರ್ವಹಣೆ ನನ್ನ ಹೆಗಲಿಗೆ ಬಿದ್ದಿದ್ದು ನನ್ನ ಭಾಗ್ಯ. ಅದು ನನ್ನನ್ನು ಲೋಹಿಯಾರ ಎಲ್ಲ ಕೃತಿಗಳೆಡೆಗೆ, ಜೀವನ ಚರಿತ್ರೆಗಳ ಕಡೆಗೆ ಒಯ್ಯುತ್ತಲೇ ಇದೆ.

ಇದೆಲ್ಲದರ ಫಲವೇ 'ಡಾಕ್ಟರ್ ಸಾಹೇಬ್: ರಾಮಮನೋಹರ ಲೋಹಿಯಾ ಜೀವನಯಾನ' ಎಂಬ ವೈಚಾರಿಕ ಜೀವನಚರಿತ್ರೆ. ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯಕ್ಕೆ ಡಾಕ್ಟರೇಟ್ ಪ್ರಬಂಧ ಸಲ್ಲಿಸಿ ಭಾರತಕ್ಕೆ ಬಂದ ಮೇಲೆ ಜನ ಲೋಹಿಯಾರನ್ನು ಪ್ರೀತಿಯಿಂದ 'ಡಾಕ್ಟರ್ ಸಾಹೇಬ್' ಎಂದು ಕರೆದರು. ಸಮಾಜವಾದಿ ಪಕ್ಷಗಳ ವಲಯದಲ್ಲೂ, ವೈಚಾರಿಕ ವಲಯದಲ್ಲೂ 'ಡಾಕ್ಟರ್ ಸಾಹೇಬ್' ಎಂದೇ ಪರಿಚಿತರಾಗಿದ್ದ ಅವರು ದೇಶದ ಲಿಂಗಭೇದ, ಧರ್ಮಭೇದ, ವರ್ಣಭೇದಗಳ ಕಾಯಿಲೆಗಳಿಗೆ ಸದಾ ಮದ್ದು ಹುಡುಕಿದ ಸಾಮಾಜಿಕ ಡಾಕ್ಟರ್ ಕೂಡ ಆಗಿದ್ದರು.

'ಡಾಕ್ಟರ್ ಸಾಹೇಬ್' ಕೃತಿ ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿರುವ ಲೋಹಿಯಾ ಜೀವನ ಚರಿತ್ರೆಗಳು, ಲೋಹಿಯಾ ಪತ್ರಗಳು, ಸಾವಿರಾರು ಪುಟಗಳ ಭಾಷಣಗಳು, ಬರಹಗಳಿಂದ ವಿವರಗಳನ್ನು ಪಡೆದುಕೊಂಡಿದೆ. ಇಂದುಮತಿ ಕೇಳ್ಕರ್ ಬರೆದ ಸಮಗ್ರ ಜೀವನ ಚರಿತ್ರೆ 'ಡಾ. ರಾಮ್‌ಮನೋಹರ ಲೋಹಿಯಾ: ಜೀವನ್ ಔರ್ ದರ್ಶನ್' ಹಾಗೂ ಅದರ ಸಂಕ್ಷಿಪ್ತ ಇಂಗ್ಲಿಷ್ ಆವೃತ್ತಿ; ಓಂಕಾರ್ ಶರದ್ ಅವರ 'ಲೋಹಿಯಾ', ಮಸ್ತಂ ಕಪೂರರ 'ರಾಮ್‌ಮನೋಹರ್ ಲೋಹಿಯಾ: ಆ್ಯನ್ ಇಂಟ್ರೊಡಕ್ಷನ್'– ಈ ಪುಸ್ತಕಗಳಲ್ಲಿನ ಜೀವನ ಚರಿತ್ರಾತ್ಮಕ ವಿವರಗಳು 'ಡಾಕ್ಟರ್ ಸಾಹೇಬ್' ಕೃತಿಯಲ್ಲಿವೆ. ಲೋಹಿಯಾ ಗದ್ಯ ಬರಹಗಳ ಹಿಂದಿ, ಇಂಗ್ಲಿಷ್ ಮೂಲಗಳ ಜೊತೆಗೇ ಕನ್ನಡಾನುವಾದಗಳಿಗೂ, ಓಂಪ್ರಕಾಶ್ ದೀಪಕ್ ಅವರ 'ಡಾ. ಲೋಹಿಯಾ' (ಅನು: ಹೇಮಾ ಮತ್ತು ತಿಪ್ಪೇಸ್ವಾಮಿ), ಓಂಕಾರ್ ಶರದ್ ಅವರ 'ಲೋಹಿಯಾ' (ಅನು: ಹಸನ್ ನಯೀಂ ಸುರಕೋಡ) ಕನ್ನಡಾನುವಾದಗಳಿಗೂ ಈ ಕೃತಿ ಋಣಿಯಾಗಿದೆ. ಲೋಹಿಯಾರ ಸಮಸ್ತ ಕೃತಿಗಳು, ಲೋಹಿಯಾ ಕುರಿತ ಹತ್ತಾರು ಕೃತಿಗಳ ಸಾರದಿಂದ ರೂಪುಗೊಂಡ 'ಡಾಕ್ಟರ್ ಸಾಹೇಬ್' ಕನ್ನಡದ ಹೊಸ ತಲೆಮಾರುಗಳನ್ನು ಸಮಾನತೆಯ ಚಿಂತನೆಗಳ ಕಡೆಗೆ ಒಯ್ಯುವಲ್ಲಿ ಯಶಸ್ವಿಯಾದರೆ ಈ ಬರವಣಿಗೆ ಸಾರ್ಥಕವಾಗಬಲ್ಲದು.

ಎಂಟು ವರ್ಷದ ಹುಡುಗನಾಗಿದ್ದಾಗಿನಿಂದಲೂ ಕನ್ನಡನಾಡಿನ ಜನಪ್ರಿಯ ವಾರಪತ್ರಿಕೆ 'ಸುಧಾ' ಜೊತೆಗೇ ಬೆಳೆದಿರುವ ನನಗೆ, 'ಡಾಕ್ಟರ್ ಸಾಹೇಬ್' 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿರುವುದು ಹೆಮ್ಮೆ, ಆನಂದದ ಸಂಗತಿ. 'ಸುಧಾ' ಸಂಪಾದಕೀಯ ಬಳಗಕ್ಕೆ, ಓದುಗಿಯರು, ಓದುಗರ ಬಳಗಕ್ಕೆ ನನ್ನ ಕೃತಜ್ಞತೆಗಳು.

**–ನಟರಾಜ್ ಹುಳಿಯಾರ್**